# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ, ಕರ್ನಾಟಕ.

Phone No: 08282-256166, mob: 7022254993ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in


ಸಂಖ್ಯೆ: ಕುವಿ/ಪವಿ/ಪಿಜಿ/4816 /2025-26 ದಿನಾಂಕ:29-11-2025.

## ಪ್ರಕಟಣೆ

**ವಿಷಯ:** ಜನವರಿ-2026ರಲ್ಲಿ ಜರುಗಲಿರುವ ವಿವಿಧ ಸ್ನಾತಕೋತ್ತರ ಪದವಿಗಳ (ರೆಗ್ಯೂಲರ್) ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27-11-2025

*****

ಕುವೆಂಪು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಪದವಿಗಳ (ರೆಗ್ಯೂಲರ್) ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನ **(Freshers)** ಪ್ರಥಮ, ದ್ವಿತೀಯ, ತೃತೀಯ ಮತ್ತು ಚತುರ್ಥ ಸೆಮಿಸ್ಟರ್‌ನ **(Repeaters)** (MCA & MBA ಪ್ರಥಮ ಸೆಮಿಸ್ಟರ್ ಹೊರತು ಪಡಿಸಿ) ಲಿಖಿತ ಪರೀಕ್ಷೆಗಳು **ದಿನಾಂಕ: 13-01-2026ರಿಂದ** ಪ್ರಾರಂಭವಾಗುತ್ತವೆ. UUCMS ತಂತ್ರಾಂಶದಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾದ ವಿವಿಧ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿಗಳನ್ನು ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಶುಲ್ಕ ಸಂದಾಯ ಮಾಡಿ ವಿಭಾಗಾಧ್ಯಕ್ಷರು/ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸಲು ತಿಳಿಸಲಾಗಿದೆ.

| **ಲಿಖಿತ / ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳ ವಿವರ:** | |
|---|---|
| 1) | **ಸೈದಾಂತಿಕ ಪರೀಕ್ಷೆಗಳು : 13-01-2026ರಿಂದ** |
| 2) | **ಪ್ರಾಯೋಗಿಕ ಪರೀಕ್ಷೆಗಳನ್ನು - ರೆಗ್ಯುಲರ್ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಲಿಖಿತ ಪರೀಕ್ಷೆ ನಡೆದ ನಂತರ ಒಂದು ವಾರದ ಒಳಗೆ ಮುಕ್ತಾಯಗೊಳಿಸುವುದು.** |
| 3) | **ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ದಿನಾಂಕ:29-12-2025ರೊಳಗೆ ಕಡ್ಡಾಯವಾಗಿ ನಮೂದಿಸಬೇಕು (ಸದರಿ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಶಾಲಾ ನಿರ್ದೇಶಕರಿಂದ ಅನುಮೋದನೆ ಪಡೆದ ಆಂತರಿಕ ಅಂಕಗಳನ್ನು ಆನ್‌ಲೈನ್ ಮೂಲಕ ನಮೂದಿಸಿ Freeze ಮಾಡಲು ಈ ಮೂಲಕ ಸೂಚಿಸಲಾಗಿದೆ)** |
| 4) | **ವಿದ್ಯಾರ್ಥಿಗಳ ಪ್ರವೇಶ ಪತ್ರದ ಮುದ್ರಣವನ್ನು ದಿನಾಂಕ: 01-01-2026 ರಿಂದ ದಿನಾಂಕ:05-01-2026ರೊಳಗೆ ಮುದ್ರಿಸಿಕೊಳ್ಳಬೇಕು.** |

| **ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು:** | | |
|---|---|---|
| 1) | ವಿಳಂಬ ಶುಲ್ಕವಿಲ್ಲದೆ | 08-12-2025 ರಿಂದ 20-12-2025 ರವರೆಗೆ |
| 2) | ವಿಳಂಬ ಶುಲ್ಕ ರೂ. 100=00ರಂತೆ | 21-12-2025 ರಿಂದ 22-12-2025 ರವರೆಗೆ |
| 3) | ವಿಳಂಬ ಶುಲ್ಕ ರೂ. 500=00ರಂತೆ | 23-12-2025 ರಿಂದ 24-12-2025 ರವರೆಗೆ |

.....2



Scanned with OKEN Scanner

| ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂ ಪರೀಕ್ಷೆಗಳು (ವೃತ್ತಿಪರ ಕೋರ್ಸ್‌ಗಳು) [M.C.A/M.T.A/M.B.A/M.B.A(TTM)/ M.B.A(HRM)/Journalism & Mass Communication/M.P.Ed/ M.Ed / Bio-Technology/ Bioinformatics/ Psychology/ Industrial Chemistry/ Chemistry/ M.Sc (Hon's) (Applied Chemistry) Bio Chemistry/Food Technology/ Computer Science / Library & Information Science / MSW/ Pharmaceutical Chemistry/ Organic Chemistry/Applied Geology (GI & ESRM). | | | | |
|---|---|---|---|---|
| | | ಪರೀಕ್ಷಾ ಶುಲ್ಕ | ಸೈದ್ಧಾಂತಿಕ ಪರೀಕ್ಷೆಯ ಗಣಕೀಕೃತ ಸಂರಕ್ಷಣೆ ಶುಲ್ಕ | ಒಟ್ಟು |
| 1) | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.2865/- | ರೂ.200/- | ರೂ.3065/- |
| 2) | ಯಾವುದೇ ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಸೈದ್ಧಾಂತಿಕ) (ಪ್ರತಿ ಸೆಮಿಸ್ಟರ್ ಪ್ರತ್ಯೇಕವಾಗಿ) | ರೂ.560/- | ರೂ.200/- | ರೂ.760/- |
| 3) | ಯಾವುದೇ ಸೆಮಿಸ್ಟರ್‌ನ ಒಂದು ಪ್ರಾಕ್ಟಿಕಲ್ ಪರೀಕ್ಷೆಗೆ | ರೂ.560/- | ರೂ.200/- | ರೂ.760/- |

| ಸ್ನಾತಕೋತ್ತರ ಸೆಮಿಸ್ಟರ್ ಸ್ಕೀಂ ಪರೀಕ್ಷೆಗಳು (ವೃತ್ತಿಪರವಲ್ಲದ ಕೋರ್ಸುಗಳಿಗೆ ಮಾತ್ರ) MA (Kannada/ English/ Hindi/ Sanskrit/ Urdu/ Economics/ History & Archaeology/ Political Science/ Sociology), M.Com, M.Sc (Botany/ Zoology/ Microbiology/ Electronics/ Wildlife & Management/ Environment Science/ Mathematics/ Physics) | | | | |
|---|---|---|---|---|
| | | ಪರೀಕ್ಷಾ ಶುಲ್ಕ | ಸೈದ್ಧಾಂತಿಕ ಪರೀಕ್ಷೆಯ ಗಣಕೀಕೃತ ಸಂರಕ್ಷಣೆ ಶುಲ್ಕ | ಒಟ್ಟು |
| 01 | ಪ್ರತಿ ಸೆಮಿಸ್ಟರ್‌ನ ಪೂರ್ಣ ಪರೀಕ್ಷೆಗೆ | ರೂ.2540/- | ರೂ.200/- | ರೂ.2740/- |
| 02 | ಯಾವುದೇ ಸೆಮಿಸ್ಟರ್‌ನ ಒಂದು ಪತ್ರಿಕೆಗೆ (ಥಿಯರಿ) (ಪ್ರತಿ ಸೆಮಿಸ್ಟರ್ ಪ್ರತ್ಯೇಕವಾಗಿ) | ರೂ.560/- | ರೂ.200/- | ರೂ.760/- |
| 03 | ಯಾವುದೇ ಸೆಮಿಸ್ಟರ್‌ನ ಒಂದು ಪ್ರಾಕ್ಟಿಕಲ್ ಪರೀಕ್ಷೆಗೆ | ರೂ.560/- | ರೂ.200/- | ರೂ.760/- |

## *ವಿದ್ಯಾರ್ಥಿಗಳಿಗೆ ಸೂಚನೆ*

ಅ) ವಿದ್ಯಾರ್ಥಿಗಳು online ಮುಖಾಂತರ ಅರ್ಜಿ ಸಲ್ಲಿಸಲು www.uucmsನಲ್ಲಿ login ಆಗಿ ಪರೀಕ್ಷೆ ತೆಗೆದುಕೊಳ್ಳುವ ನೊಂದಣಿ ಸಂಖ್ಯೆ, ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಅರ್ಜಿಯನ್ನು ಸಲ್ಲಿಸಬೇಕು. ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ನೆಟ್ ಬ್ಯಾಂಕಿಂಗ್‌ನಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ವಿಭಾಗ / ಕಾಲೇಜುಗಳಲ್ಲಿ ಸಲ್ಲಿಸಬೇಕು.

ಆ) ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card/Credit Card/Online Banking/Paytm wallet ಮೂಲಕ ನೇರವಾಗಿ ಪಾವತಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಚಲನ್ ಮುದ್ರಿಸಿಕೊಂಡು ಪಾವತಿಸಿದ ನಂತರ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ವಿಭಾಗ / ಕಾಲೇಜಿಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಇ) **S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು.** ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು / ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಸಹ ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.



Scanned with OKEN Scanner

ಈ) ಅದೇ ರೀತಿ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಹಾಗೂ ಇತರೆ ಎಲ್ಲಾ ವಿದ್ಯಾರ್ಥಿಗಳು ಪೂರ್ಣ ಶುಲ್ಕ ಪಾವತಿಸಬೇಕು.

ಉ) **ವಿಶೇಷ ಸೂಚನೆ:**

**ವಿದ್ಯಾರ್ಥಿಗಳು Internet Browsing Centreನ ಮಾಲೀಕರ ಬ್ಯಾಂಕ್ ಖಾತೆಯ ಮೂಲಕ ವಿಶ್ವವಿದ್ಯಾಲಯಕ್ಕೆ ಪರೀಕ್ಷಾ ಶುಲ್ಕ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು.**

1) ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ವಿಭಾಗ / ಕಾಲೇಜಿಗೆ ಒಪ್ಪಿಸಬೇಕು.
2) ವಿದ್ಯಾರ್ಥಿಗಳು ಪಾವತಿಸುವ ಪರೀಕ್ಷೆ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರುಪಾವತಿ ಮಾಡುವುದಿಲ್ಲ.
3) ಈಗಾಗಲೇ ಸವಾಲಿನ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು.
4) ನಿಯಮಾನುಸಾರ ಫಲಿತಾಂಶ ಪ್ರಕಟಗೊಂಡ 10 ದಿನಗಳೊಳಗಾಗಿ ವಿದ್ಯಾರ್ಥಿಗಳು ಸವಾಲಿನ ಮೌಲ್ಯಮಾಪನಕ್ಕೆ **ರೂ. 3995/-ಗಳ** ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
5) ಜನವರಿ-2026ರ ಮಾಹೆಯಲ್ಲಿ ನಡೆಯಲಿರುವ ಈ ಪರೀಕ್ಷೆಗಳು **ಬೆಸ ಸೆಮಿಸ್ಟರ್ ಪರೀಕ್ಷೆಗಳಾಗಿದ್ದು, ಸಮ ಸೆಮಿಸ್ಟರ್‌ನ ಅನುತ್ತೀರ್ಣ ಪತ್ರಿಕೆಗಳನ್ನು ಬೆಸ ಸೆಮಿಸ್ಟರ್ ಪತ್ರಿಕೆಗಳೊಂದಿಗೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**
6) ಆದರೆ, ಈಗಾಗಲೇ ನಾಲ್ಕನೇ ಸೆಮಿಸ್ಟರ್ (ಸಿ.ಬಿ.ಸಿ.ಎಸ್. ಸ್ಕೀಂನ ವಿದ್ಯಾರ್ಥಿಗಳಿಗೆ ಮಾತ್ರ) ಮುಗಿದಿದ್ದು, ಹಾಗೂ ದ್ವಿಗುಣ ಅವಧಿ ಮುಗಿಯದ ವಿದ್ಯಾರ್ಥಿ ಒಂದು ವೇಳೆ ತನ್ನ ಹಿಂದಿನ ಸೆಮಿಸ್ಟರ್‌ನ ಯಾವುದೇ ವಿಷಯ (ಪತ್ರಿಕೆ)ಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ, ಸದರಿ ವಿದ್ಯಾರ್ಥಿಯು ಮುಂದಿನ **ಬೆಸ** ಸೆಮಿಸ್ಟರ್ ಪರೀಕ್ಷೆಗೆ ವಿಶೇಷ ಶುಲ್ಕ ಪಾವತಿಸುವ ಅಗತ್ಯವಿರುವುದಿಲ್ಲ. ಆದರೆ **ಸಮ** ಸೆಮಿಸ್ಟರ್ ಪರೀಕ್ಷೆಗಳ ಒಂದು ಸೆಮಿಸ್ಟರ್‌ಗೆ **ವಿಶೇಷ ಶುಲ್ಕ ರೂ.2420/- + ಪ್ರತಿ ಪತ್ರಿಕೆಗೆ ರೂ. 560/- + ಅಂಕಪಟ್ಟಿ ಸಂರಕ್ಷಣೆ ಶುಲ್ಕ 200/- ಒಟ್ಟು ರೂ.3180/-ನ್ನು** ಪಾವತಿಸಿ **ಬೆಸ** ಸೆಮಿಸ್ಟರ್ ಪರೀಕ್ಷೆಗಳ ಜೊತೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಇಂತಹ ವಿದ್ಯಾರ್ಥಿಗಳು ಪರೀಕ್ಷಾ ವಿಭಾಗದಿಂದ ಪ್ರತ್ಯೇಕ ಮುದ್ರಿತ ಅರ್ಜಿ (Manual Application)ಯನ್ನು ಪಡೆದು ಭರ್ತಿ ಮಾಡಿ ವಿಭಾಗಾಧ್ಯಕ್ಷ / ಪ್ರಿನ್ಸಿಪಾಲರ ಮೂಲಕ ಸಲ್ಲಿಸತಕ್ಕದ್ದು.

## ***ವಿಭಾಗದ ಮುಖ್ಯಸ್ಥರು / ಪ್ರಾಚಾರ್ಯರಿಗೆ ಸೂಚನೆಗಳು***

1) **ಪರೀಕ್ಷಾ ಶುಲ್ಕ ಪಾವತಿಸುವ ಮಾಹಿತಿಯು ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪುವಂತೆ ಆಯಾ ವಿಭಾಗಾಧ್ಯಕ್ಷರು/ಕಾಲೇಜು ಪ್ರಾಂಶುಪಾಲರುಗಳು ನಿಗಾ ವಹಿಸತಕ್ಕದ್ದು.**
2) ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳಿಂದ ಮಾತ್ರ ಪರೀಕ್ಷಾ ಅರ್ಜಿ ಹಾಗೂ ಪರೀಕ್ಷಾ ಶುಲ್ಕ ಸಂಗ್ರಹಿಸಬೇಕು. ಹಾಗೂ **ಒಂದು ಪ್ರತಿಯನ್ನು ವಿಭಾಗದಲ್ಲಿ / ಕಾಲೇಜಿನಲ್ಲಿ ಮಾಹಿತಿಗಾಗಿ ಸಂರಕ್ಷಿಸಿಕೊಳ್ಳುವುದು.**
3) **ಹಾಜರಾತಿ ಕೊರತೆ ಇರುವಂತಹ ಹಾಗೂ ಪ್ರವೇಶಾನುಮೋದನೆಯಾಗದ ವಿದ್ಯಾರ್ಥಿಗಳ ಪಟ್ಟಿಯನ್ನು ಪರೀಕ್ಷೆಗಳು ಆರಂಭವಾಗುವ 10 ದಿನ ಮುಂಚಿತವಾಗಿ ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸುವುದು.** ಒಂದು ವೇಳೆ ಹಾಜರಾತಿ ಕೊರತೆ ಹಾಗೂ ಪ್ರವೇಶಾನುಮೋದನೆಯಾಗದೇ ಇರುವ ವಿದ್ಯಾರ್ಥಿಗಳು ಮುಂದಿನ ಸೆಮಿಸ್ಟರ್‌ಗೆ ಅರ್ಹತೆಯಿಲ್ಲದೆ ಪರೀಕ್ಷಾ ಅರ್ಜಿ ಸಲ್ಲಿಸಿದ್ದಲ್ಲಿ/ಪರೀಕ್ಷೆ ತೆಗೆದುಕೊಂಡಲ್ಲಿ ಮುಂದಿನ ಎಲ್ಲಾ ತರಹದ ತೊಂದರೆಗಳಿಗೆ ವಿಭಾಗಾಧ್ಯಕ್ಷರು/ ಕಾಲೇಜಿನ ಪ್ರಾಂಶುಪಾಲರೇ ನೇರ ಜವಾಬ್ದಾರರಾಗಿರುತ್ತಾರೆ.



Scanned with OKEN Scanner

4) S.S.P. ಪೋರ್ಟಲ್ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನ ಜಮಾ ಮಾಡಲಾಗುತ್ತಿರುವುದರಿಂದ, ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸುವಂತೆ ನೋಡಿಕೊಳ್ಳುವುದು.

5) ಕೊನೆಯ ದಿನಾಂಕದ ನಂತರ ಪರೀಕ್ಷಾಂಗ ವಿಭಾಗದಲ್ಲಿ ಪ್ರತಿ ವಿಭಾಗ / ಕಾಲೇಜಿನ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪರಿಶೀಲಿಸಲಾಗುವುದು. ಶುಲ್ಕ ಪಾವತಿ ಸಮರ್ಪಕವಾಗಿ ಕಂಡುಬರದೇ ಇರುವ ಪಕ್ಷದಲ್ಲಿ ಆ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ನೀಡಲಾಗುವುದಿಲ್ಲ.

6) ಪ್ರಾಯೋಗಿಕ / ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ, ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಗ್ರಿಗಳ ಬೇಡಿಕೆ ಪಟ್ಟಿಗಳನ್ನು **ದಿನಾಂಕ:10-12-2025ರೊಳಗಾಗಿ ಉಪಕುಲಸಚಿವ (ಪರೀಕ್ಷಾಂಗ) ಇವರಿಗೆ ತಲುಪಿಸಲು ಸೂಚಿಸಿದೆ.**

7) ಪ್ರಶ್ನೆ ಪತ್ರಿಕೆಗಳ ಬೇಡಿಕೆಯನ್ನು **ದಿನಾಂಕ:10-12-2025ರೊಳಗಾಗಿ ಉಪಕುಲಸಚಿವ (ಪರೀಕ್ಷಾಂಗ) ಇವರಿಗೆ ತಲುಪಿಸಲು ಸೂಚಿಸಿದೆ.**

8) **ಸಿ.ಬಿ.ಸಿ.ಎಸ್. ರೆಗ್ಯುಲೇಷನ್ 15.3ರ ಅನ್ವಯ ವಿದ್ಯಾರ್ಥಿಗಳಿಂದ ಸಹಿ ಪಡೆದ ಆಂತರಿಕ ಅಂಕಪಟ್ಟಿಗಳನ್ನು ಶಾಲಾ ನಿರ್ದೇಶಕರಿಗೆ ಸಲ್ಲಿಸಿ ಆಂತರಿಕ ಪರಿಶೀಲನಾ ಸಮಿತಿಯ ಅನುಮೋದನೆ ಪಡೆದ ನಂತರ ಆನ್‌ಲೈನ್ ಮೂಲಕ ನಮೂದಿಸಿ Freeze ಮಾಡತಕ್ಕದ್ದು. ಆನ್‌ಲೈನ್‌ನಲ್ಲಿ Freeze ಮಾಡಿದ ಮುದ್ರಿತ ಪ್ರತಿ ಹಾಗೂ ಶಾಲಾ ನಿರ್ದೇಶಕರಿಂದ ಅನುಮೋದನೆಗೊಂಡ ಪ್ರತಿಗಳನ್ನು ಕುಲಸಚಿವ (ಪರೀಕ್ಷಾಂಗ) ಇವರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಈ ಪ್ರಕಟಣೆಯಲ್ಲಿ ಸೂಚಿಸಿರುವಂತೆ ದಿನಾಂಕ: 05-01-2026ರೊಳಗೆ IA ಅಂಕಗಳನ್ನು Upload ಮಾಡುವುದು.**

9) **ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ, ಯಾವುದೇ ತೊಂದರೆಗಳಿದ್ದಲ್ಲಿ ಅದನ್ನು ಸೈದ್ಧಾಂತಿಕ ಪರೀಕ್ಷೆ ಮುಗಿಯುವ ಒಳಗಾಗಿ ಬಗೆಹರಿಸಿಕೊಳ್ಳಬೇಕು.**

10) ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ನಿಯಮಾನುಸಾರ onlineನಲ್ಲಿ ದಾಖಲಿಸದೇ ಬಿಟ್ಟು ಹೋದಲ್ಲಿ ಅಯಾ ವಿಭಾಗಾಧ್ಯಕ್ಷರು/ ಕಾಲೇಜಿನ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.

11) **ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳಿಂದ ಪರೀಕ್ಷೆಗಳಿಗೆ ಅರ್ಜಿಯನ್ನು ಸ್ವೀಕರಿಸಬಾರದು, ಮತ್ತು ಅಂತಹ ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಪರೀಕ್ಷೆ ಕೂಡ ನಡೆಸಬಾರದು. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ ಸ್ವೀಕರಿಸಿದಲ್ಲಿ ಸಂಬಂಧಪಟ್ಟ ವಿಭಾಗಾಧ್ಯಕ್ಷರು / ಕಾಲೇಜಿನ ಪ್ರಾಂಶುಪಾಲರು ಜವಾಬ್ದಾರರಾಗಿರುತ್ತಾರೆ.**

12) ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿರುವಂತಹ (ಕಾಲೇಜು ಮತ್ತು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ) ವಿಭಾಗ / ಕಾಲೇಜುಗಳಲ್ಲಿ ಹಾಜರಿಲ್ಲದ ವಿದ್ಯಾರ್ಥಿಗಳು ಕೂಡ ನಿಗದಿತ ಸಮಯದೊಳಗೆ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಂತೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು / ಕಾಲೇಜಿನ ಪ್ರಾಂಶುಪಾಲರುಗಳು ನಿಗಾವಹಿಸತಕ್ಕದ್ದು.

13) ಸ್ನಾತಕ ಪದವಿಯ ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಸ್ನಾತಕೋತ್ತರ ವಿದ್ಯಾರ್ಥಿಗಳ ಆಂತರಿಕ ಪರೀಕ್ಷೆಗಳಿಗೆ ಉಪಯೋಗಿಸಬಾರದು..

R. [signature] 29/11/25

ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನಸಹ್ಯಾದ್ರಿ,
ಶಂಕರಘಟ್ಟ - 577 451.
29/11

**ಇವರಿಗೆ,**

01 ಎಲ್ಲಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
02 ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಕಡೂರು./ ಐ.ಡಿ.ಎಸ್.ಜಿ. ಕಾಲೇಜು ಕ್ಯಾಂಪಸ್. ಚಿಕ್ಕಮಗಳೂರು
03 ಅಧ್ಯಕ್ಷರು, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ವಿಭಾಗ/ ಉರ್ದು ಅಧ್ಯಯನ ವಿಭಾಗ, ಸಹ್ಯಾದ್ರಿ ಕಾಲೇಜು, ಆವರಣ, ಶಿವಮೊಗ್ಗ.



Scanned with OKEN Scanner

244 | Help Line 70222540...

04 ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ಕಲಾ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ.
05 ಪ್ರಾಂಶುಪಾಲರು, ಆಚಾರ್ಯ ತುಳಸಿ ನ್ಯಾಷನಲ್ ಕಾಲೇಜು, ಶಿವಮೊಗ್ಗ.
06 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ.
07 ಪ್ರಾಂಶುಪಾಲರು, ಜ್ಞಾನಸಾಗರ ಮಹಾವಿದ್ಯಾಲಯ, ಅಕ್ಷರ ಪಿ.ಜಿ. ಸೆಂಟರ್, ಜೆ.ಎನ್.ಎನ್.ಸಿ.ಇ, ಎದುರು ಅಕ್ಷರನಗರ, ಚಿನ್ನಂ ಮಂಬಮರ, ಸವಳಂಗ ರಸ್ತೆ, ಶಿವಮೊಗ್ಗ.
08 ಪ್ರಾಂಶುಪಾಲರು, ಪಿ.ಇ.ಎಸ್. ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಶಿವಮೊಗ್ಗ.
09 ಪ್ರಾಂಶುಪಾಲರು, ಕೊಡಚಾದ್ರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ.
10 ಪ್ರಾಂಶುಪಾಲರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ.
11 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ.
12 ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ.
13 ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ.
14 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ.
15 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ.
16 ಪ್ರಾಂಶುಪಾಲರು, ಎಲ್.ಬಿ ಮತ್ತು ಎಸ್.ಬಿ.ಎಸ್, ಕಾಲೇಜು, ಸಾಗರ.
17 ಪ್ರಾಂಶುಪಾಲರು, ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸಾಗರ.
18 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು.
19 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ.
20 ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎನ್.ಆರ್.ಪುರ.
21 ಪ್ರಾಂಶುಪಾಲರು, ಐ.ಡಿ.ಎಸ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು.
22 ಪ್ರಾಂಶುಪಾಲರು, ಎಂ.ಇ.ಎಸ್/ಎಂ.ಪಿ.ಎಸ್ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಿಕ್ಕಮಗಳೂರು.
23 ಪ್ರಾಂಶುಪಾಲರು, ಶ್ರೀ. ಜಗದ್ಗುರು ಚಂದ್ರಶೇಖರ ಭಾರತಿ ಮೆಮೋರಿಯಲ್ ಕಾಲೇಜು, ಶೃಂಗೇರಿ.
24 ಪ್ರಾಂಶುಪಾಲರು, ಎಜುರೈಟ್ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್, ಆಲ್ಕೊಳ, ಶಿವಮೊಗ್ಗ
25 ಪ್ರಾಂಶುಪಾಲರು, ಕಟೀಲ್ ಅಶೋಕ್ ಪೈ ಮೆಮೋರಿಯಲ್ ಇನ್ಸ್ಟಿಟ್ಯೂಟ್, ವಿನೋಧಿನಿ ಕಟ್ಟಡ, ಪಾರ್ಕ್ ಬಡಾವಣೆ, ಮಲ್ಲಿಕಾರ್ಜುನ ಚಿತ್ರ ಮಂದಿರದ ಹತ್ತಿರ, ದುರ್ಗಿಗುಡಿ, ಶಿವಮೊಗ್ಗ
26 ಪ್ರಾಂಶುಪಾಲರು, ಕುಮದ್ವತಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ.
27 ಶ್ರೀ ಸಿದ್ದಲಿಂಗ ಜಿ. ಪಾಟೀಲ್, ಉಪಕುಲಸಚಿವರು ಮತ್ತು ನೋಡಲ್ ಅಧಿಕಾರಿಗಳು (UUCMS), ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – **ಸೂಕ್ತ ಕ್ರಮಕ್ಕಾಗಿ.**
28 ತಾಂತ್ರಿಕ ಸಹಾಯಕರು, ಪರೀಕ್ಷಾ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – **ಸೂಕ್ತ ಕ್ರಮಕ್ಕಾಗಿ.**

**ಪ್ರತಿಗಳು:**

1) ಆಪ್ತಶಾಖೆ :- ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3) ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4) ಸಂಚಾಲಕರು, ಎಸ್.ಸಿ/ಎಸ್.ಟಿ. ಸೆಲ್, ಓ.ಬಿ.ಸಿ. ಸೆಲ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ಕಛೇರಿ ಪ್ರತಿ.



Scanned with OKEN Scanner

# ಕುವೆಂಪು ವಿಶ್ವವಿದ್ಯಾಲಯ

## ಪರೀಕ್ಷಾ ವೇಳಾಪಟ್ಟಿ

**ಜನವರಿ – 2026ರಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಗಳ ಸಿ.ಬಿ.ಸಿ.ಎಸ್.ಸ್ಕೀಂನ ಪರೀಕ್ಷೆಯ ವೇಳಾಪಟ್ಟಿ**
**ಎಂ.ಎ/ಎಂ.ಎಸ್ಸಿ/ಎಂ.ಎಸ್ಸಿ. ಆನರ್ಸ್(ಅನ್ವಯಿಕ ರಸಾಯನಶಾಸ್ತ್ರ) ಎಂ.ಎಸ್.ಡಬ್ಲ್ಯೂ/ಎಂ.ಎಡ್/**
**ಎಂ.ಪಿ.ಇಡಿ/ಎಂ.ಕಾಂ/ಎಂ.ಬಿ.ಎ/ ಎಂ.ಬಿ.ಎ(ಹೆಚ್.ಆರ್.ಎಂ)/ ಎಂ.ಬಿ.ಎ(ಟಿಟಿಎಂ) (Freshers & Repeaters)**
**ಸೆಮಿಸ್ಟರ್ ಪರೀಕ್ಷೆಗಳು (ಎಂ.ಸಿ.ಎ ಮತ್ತು ಎಂ.ಬಿ.ಎ ಪ್ರಥಮ ಸೆಮಿಸ್ಟರ್ ಹೊರತು ಪಡಿಸಿ)**

| ತೃತೀಯ ಸೆಮಿಸ್ಟರ್ (Freshers & Repeaters) ಪರೀಕ್ಷೆಗಳು | ಪ್ರಥಮ ಸೆಮಿಸ್ಟರ್ (Freshers & Repeaters) ಪರೀಕ್ಷೆಗಳು | ಚತುರ್ಥ ಸೆಮಿಸ್ಟರ್ (Repeaters) ಪರೀಕ್ಷೆಗಳು | ದ್ವಿತೀಯ ಸೆಮಿಸ್ಟರ್ (Repeaters) ಪರೀಕ್ಷೆಗಳು |
|---|---|---|---|
| Time: 10.00am to 1.00pm | Time: 02.00pm to 5.00pm | Time: 10.00am to 1.00pm | Time: 02.00pm to 5.00pm |
| ಪತ್ರಿಕೆ 01 | 15–01–2026 – ಗುರುವಾರ | ಪತ್ರಿಕೆ 01 | 16–01–2026 – ಶುಕ್ರವಾರ |
| ಪತ್ರಿಕೆ 02 | 17–01–2026 – ಶನಿವಾರ | ಪತ್ರಿಕೆ 02 | 20–01–2026 – ಮಂಗಳವಾರ |
| ಪತ್ರಿಕೆ 03 | 19–01–2026 – ಸೋಮವಾರ | ಪತ್ರಿಕೆ 03 | 22–01–2026 – ಗುರುವಾರ |
| ಪತ್ರಿಕೆ 04 | 21–01–2026 – ಬುಧವಾರ | ಪತ್ರಿಕೆ 04 | 28–01–2026 – ಬುಧವಾರ |
| ಪತ್ರಿಕೆ 05 | 23–01–2026 – ಶುಕ್ರವಾರ | ಪತ್ರಿಕೆ 05 | 30–01–2026 – ಶುಕ್ರವಾರ |
| ಪತ್ರಿಕೆ 06 | 27–01–2026 – ಮಂಗಳವಾರ | ಪತ್ರಿಕೆ 06 | 02–02–2026 – ಸೋಮವಾರ |
| ಪತ್ರಿಕೆ 07 | 29–01–2026 – ಗುರುವಾರ | ಪತ್ರಿಕೆ 07 | 03–02–2026 – ಮಂಗಳವಾರ |
| ಪತ್ರಿಕೆ 08 | 31–01–2026 – ಶನಿವಾರ | ಪತ್ರಿಕೆ 08 | 04–02–2026 – ಬುಧವಾರ |
| 3rd Semester Interdisciplinary Elective Papers – Dt: **13–01–2026 – ಮಂಗಳವಾರ** [Time : 10.00 am to 11.30 am] [Freshers & Repeaters] | | | |
| 2nd Semester Interdisciplinary Elective Papers – Dt: **13–01–2026 – ಮಂಗಳವಾರ** [Time : 02.00 pm to 03.30 pm] [New Scheme Repeaters] | | | |

**ಸೂಚನೆಗಳು:**

1) **ಮೇಲ್ಕಂಡ ವೇಳಾಪಟ್ಟಿಯಲ್ಲಿ ನಮೂದಿಸಲಾಗಿರುವ ಪ್ರಥಮ, ದ್ವಿತೀಯ, ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳ ವೇಳಾಪಟ್ಟಿಯು ನಾಲ್ಕನೇ ಸೆಮಿಸ್ಟರ್ ವ್ಯಾಸಂಗ ಮಾಡುತ್ತಿರುವ ಹಾಗೂ ಕೋರ್ಸ್ ಮುಗಿದ ವಿದ್ಯಾರ್ಥಿಗಳು ತಮ್ಮ ಹಿಂದಿನ ಸೆಮಿಸ್ಟರ್‌ನ ಪತ್ರಿಕೆಗಳಲ್ಲಿ ಅನುತ್ತೀರ್ಣಗೊಂಡು ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ.**
2) **ಪ್ರಾಯೋಗಿಕ ಪರೀಕ್ಷೆಗಳನ್ನು ಸೈದ್ಧಾಂತಿಕ ಪರೀಕ್ಷೆ ನಡೆದ ನಂತರ ಒಂದು ವಾರದ ಒಳಗೆ ಮುಕ್ತಾಯಗೊಳಿಸುವುದು.**
3) ಪ್ರಾಯೋಗಿಕ ಪರೀಕ್ಷೆಯ ದಿನಾಂಕ ಮತ್ತು ತಂಡ ಇತ್ಯಾದಿಗಳನ್ನು ಸಂಬಂಧಪಟ್ಟ ವಿಭಾಗಗಳಿಂದ ಪಡೆದುಕೊಳ್ಳತಕ್ಕದ್ದು.
4) ನಿಯಮಾನುಸಾರ ಶೇಕಡ 75 ಹಾಜರಾತಿಯು ಕಡ್ಡಾಯವಾಗಿದ್ದು, ಶೇಕಡ 75ರ ಹಾಜರಾತಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆಗೆ ಹಾಜರಾಗಲು/ಬರೆಯಲು ಅವಕಾಶವಿರುತ್ತದೆ. ಇದನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.
5) **ಸಂಯೋಜಿತ/ ಘಟಕ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗಗಳಿದ್ದಲ್ಲಿ ವಿಭಾಗದ ಮುಖ್ಯಸ್ಥರು ಸದರಿ ಮಾಹೆಯಲ್ಲಿ ನಡೆಯುವ ಸೈದ್ಧಾಂತಿಕ ಪರೀಕ್ಷೆಯ (Freshers & Repeaters) ವಿಶ್ವವಿದ್ಯಾಲಯದ ಅನುಮೋದನೆ ಪಡೆದಂತಹ ವೇಳಾಪಟ್ಟಿಯ ಪ್ರತಿಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸಿಕೊಡಲು ಕ್ರಮ ಕೈಗೊಳ್ಳುವುದು.**
6) ತಮ್ಮ ವಿಭಾಗದಲ್ಲಿ Interdisciplinary Elective with QP code ತೆಗೆದುಕೊಂಡ ಬೇರೆ ವಿಭಾಗದ ವಿದ್ಯಾರ್ಥಿಗಳ ವಿಷಯದ ವಿವರಗಳೊಂದಿಗೆ ತಕ್ಷಣವೇ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಬೇಕು.

R. ... 29/11/25

ಕುಲಸಚಿವರು (ಪರೀಕ್ಷಾಂಗ),
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನಸಹ್ಯಾದ್ರಿ,
ಶಂಕರಘಟ್ಟ 577 451.



Scanned with OKEN Scanner